# ಮಾನ್ಯ ವಿಧಾನ ಪರಿಷತ್ತಿನ ಸದ್ಯರಾದ ಶ್ರೀ ಆರ್. ಬಿ. ತಿಮ್ಮಾಪುರ ಇವರು ನಿಯಮ – 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾಹಿತಿ

## ಸೂಚನೆ:

"ರಾಜ್ಯದಲ್ಲಿ ಕೊರೋನಾ ಸೋಂಕಿನಿಂದ ಮೃತಪಟ್ಟ ಅಂದಾಜು 10,187 ರೈತರ ಸಾಲವನ್ನು ಶೀಘ್ರ ಮನ್ನಾ ಮಾಡಲು ಚಿಂತನೆ ನಡೆಸಿರುವುದಾಗಿಯೂ ಈ ಕುರಿತು ಅಂತಿಮ ತೀರ್ಮಾನವನ್ನು ಕೈಗೊಳ್ಳುವುದಾಗಿ ರಾಜ್ಯ ಸರ್ಕಾರ ಈ ಹಿಂದೆ ತಿಳಿಸಿತ್ತು. ಅಂದರೆ, ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕ್ ಹಾಗೂ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಪಡೆದಿರುವ ರೈತರು ಕೋವಿಡ್‌ನಿಂದ ಮೃತಪಟ್ಟಿದ್ದರೆ ಅಂಥ ರೈತರ ಸಾಲ ಮನ್ನಾ ಮಾಡುವುದಾಗಿ ಇದಕ್ಕಾಗಿ ಅಂದಾಜು 79.47 ಕೋಟಿ ವೆಚ್ಚವಾಗಲಿದೆ ಎಂದು ನಿರೀಕ್ಷಿಸಲಾಗಿತ್ತು. ಮಾನ್ಯ ಸಹಕಾರ ಸಚಿವರು ಸಹ ರೈತರ ಸಹಾಯಕ್ಕೆ ಧಾವಿಸುವುದಾಗಿ ಅವರ ಸಂಕಷ್ಟದಲ್ಲಿ ಭಾಗಿಯಾಗಲು ಸರ್ಕಾರ ಚಿಂತಿಸಿದೆ ಎಂದು ತಿಳಿಸಿದ್ದರು. ಆದರೆ ಇದುವರೆಗಾಯ್ತು ಸರ್ಕಾರ ಕೋವಿಡ್‌ನಿಂದ ಮೃತರಾದ ರೈತರು ಮತ್ತು ರೈತ ಕುಟುಂಬ ವರ್ಗಕ್ಕೆ ಒಂದು ನಯಾಪೈಸೆ ಸಾಲವನ್ನು ಮನ್ನಾ ಮಾಡಿಲ್ಲವಾಗಿದ್ದು, ಸರ್ಕಾರ ಕೂಡಲೇ ಕೋವಿಡ್‌ನಿಂದ ಮೃತರಾದ ರೈತರ ಸಾಲ ಮನ್ನಾ ಮಾಡಲು ಆದೇಶಿಸಬೇಕೆನ್ನುವ ವಿಷಯವನ್ನು ನಿಯಮ 330 ರ ಅಡಿಯಲ್ಲಿ ಮಾನ್ಯ ಸಹಕಾರ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."

## ಮಾಹಿತಿ:

ರಾಜ್ಯದಲ್ಲಿ ಕೊರೋನಾ 1ನೇ ಮತ್ತು 2ನೇ ಅಲೆಯಲ್ಲಿ ಮೃತಪಟ್ಟ ರೈತರ ಪೈಕಿ 10,187 ರೈತರು ಪ್ಯಾಕ್ಸ್, ಡಿಸಿಸಿ ಬ್ಯಾಂಕುಗಳಲ್ಲಿ ರೂ.79.47 ಕೋಟಿಗಳ ಸಾಲ ಪಡೆದಿರುತ್ತಾರೆ. ಈ ಮಾಹಿತಿಯನ್ನು ಪಡೆದು ಮೃತ ಪಟ್ಟ ರೈತರ ಕುಟುಂಬಕ್ಕೆ ಯಾವ ರೀತಿಯಲ್ಲಿ ನೆರವಾಗಬೇಕೆಂದು ಚಿಂತಿಸಿದ ನಂತರ ಕೊರೋನಾದಿಂದ ಸಂಕಷ್ಟದಲ್ಲಿರುವ ಮತ್ತು ಮೃತಪಟ್ಟ ರೈತರ ಕುಟುಂಬಗಳಿಗೆ ಮತ್ತು ಇತರೇ ಎಲ್ಲಾ ವರ್ಗದ ಜನರಿಗೂ ಸಹ ನೆರವಾಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಕೋವಿಡ್–19 ಸೋಕಿನಿಂದ ಮೃತಪಟ್ಟ ರೈತರು ಒಳಗೊಂಡಂತೆ ಎಲ್ಲಾ ಕುಟುಂಬಗಳಿಗೂ ಸಹ ಕೇಂದ್ರ ಸರ್ಕಾರದಿಂದ ಪ್ರತೀ ಮೃತ ಸದಸ್ಯನಿಗೆ ದೊರೆಯುವ ರೂ.50,000/–ಗಳ ಜೊತೆಯಲ್ಲಿ ರಾಜ್ಯ ಸರ್ಕಾರದಿಂದ ದುಡಿಯುವ ಸದಸ್ಯನನ್ನು ಕಳೆದುಕೊಂಡ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಒಬ್ಬ ಕಾನೂನು ಬದ್ಧ ವಾರಸುದಾರನಿಗೆ ರೂ.1.00 ಲಕ್ಷಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಈ ಯೋಜನೆಯು ಕೋವಿಡ್‌ನಿಂದ ಮೃತ ಪಟ್ಟ ರೈತರಿಗೂ ಸಹ ಅನ್ವಯವಾಗುತ್ತದೆ.
2. ಕೋವಿಡ್–19 ನ ಎರಡನೇ ಅಲೆಯ ಪರಿಣಾಮವಾಗಿ ರೈತರು ಸಹಕಾರ ಸಂಘಗಳಲ್ಲಿ ದಿ:01-03-2021 ರಿಂದ ದಿ:30–06–2021 ರ ಅವಧಿಯಲ್ಲಿ ಮರುಪಾವತಿಗೆ ಬರುವ ಸಾಲದ ಕಂತುಗಳನ್ನು ಮರುಪಾವತಿಸಲು ಕಂತುಗಳ ಅವಧಿಯನ್ನು ವಿಸ್ತರಿಸಲಾಗಿದ್ದು, ಸಂಬಂಧಿಸಿದ ಬಡ್ಡಿ ಸಹಾಯಧನವನ್ನು ರಾಜ್ಯ ಸರ್ಕಾರವೇ ಭರಿಸಲಿದೆ. ಈ ಯೋಜನೆಯು ಕೋವಿಡ್‌ನಿಂದ ಮೃತ ಪಟ್ಟ ರೈತರ ವಾರಸುದಾರರಿಗೂ ಸಹ ಅನ್ವಯವಾಗುತ್ತದೆ.

ಆದ್ದರಿಂದ ಕೊರೋನಾದಿಂದ ಮೃತಪಟ್ಟ ರೈತರು ಸಹಕಾರ ಸಂಘಗಳಲ್ಲಿ ಮಾಡಿದ್ದ ಸಾಲದ ಮೊತ್ತವನ್ನು ಸರ್ಕಾರದಿಂದ ಮನ್ನಾ ಮಾಡಲು ಪ್ರಸ್ತಾವನೆ ಇರುವುದಿಲ್ಲ.

ಆದರೆ ಸಶಕ್ತರಾಗಿರುವ ಜಿಲ್ಲಾ ಸಹಕಾರ ಬ್ಯಾಂಕುಗಳು ತಮ್ಮ ಲಾಭಾಂಶ/ನಿಧಿಯಲ್ಲಿ ಕೋವಿಡ್‌ನಿಂದ ಮೃತ ಪಟ್ಟ ರೈತರ ಸಾಲ ಮನ್ನಾ ಮಾಡಲು ಅವಕಾಶ ಇರುತ್ತದೆ. ಈ ಕುರಿತು ಈಗಾಗಲೇ ವಿಜಯಪುರ ಡಿಸಿಸಿ ಬ್ಯಾಂಕ್‌ನಲ್ಲಿ ಕ್ರೋಢೀಕೃತವಾದ ನಿಧಿಯಿಂದ ಕೋವಿಡ್‌ನಿಂದ ಮೃತಪಟ್ಟ ರೈತರ ಸಾಲ ಮನ್ನಾ ಮಾಡಲು ಅನುಮತಿ ನೀಡಲಾಗಿದೆ. ಇದರಿಂದ ವಿಜಯಪುರ ಜಿಲ್ಲೆಯ 754 ಮೃತ ರೈತರ ರೂ. 513.40 ಲಕ್ಷ ಸಾಲ ಮನ್ನಾ ಮಾಡಲು ಬ್ಯಾಂಕಿನ ಆಡಳಿತ ಮಂಡಳಿಯು ಪರಿಶೀಲಿಸುತ್ತಿದೆ.

..2

ತುಮಕೂರು ಡಿಸಿಸಿ ಬ್ಯಾಂಕಿನಲ್ಲಿ ರೈತನು ಯಾವುದೇ ಕಾರಣದಿಂದ ಮೃತ ಪಟ್ಟರೂ ಸಹ ಅವರ ಸಾಲ ಮನ್ನಾ ಮಾಡುವ ಯೋಜನೆ ಜಾರಿಯಲ್ಲಿದ್ದು, ಜಿಲ್ಲೆಯಲ್ಲಿ ಕೋವಿಡ್‌ನಿಂದ ಮೃತ ಪಟ್ಟ 326 ರೈತರ ರೂ.199.17 ಲಕ್ಷ ಸಾಲ ಮನ್ನಾ ಮಾಡಲು ಬ್ಯಾಂಕಿನ ಆಡಳಿತ ಮಂಡಳಿಯು ಪರಿಶೀಲಿಸುತ್ತಿದೆ.

**ಸಂಖ್ಯೆ: ಸಿಒ 122 ಸಿಎಲ್‌ಎಸ್ 2022**

(ಎಸ್.ಟಿ. ಸೋಮಶೇಖರ್)
ಸಹಕಾರ ಸಚಿವರು